ಕೊಟ್ಟು ಪಕ್ಕ ನಿಂತಿರ್ತಾರೆ. ಬಹುಶಃ ಈ ರೀತಿ ಫ್ಯಾನ್ಸಿ ಡ್ರೆಸ್ ಹಾಕ್ಕೊಳೋ ದೇವ್ರೂಂದ್ರೆ ಗಣಪತಿ ಒಬ್ಬನೇ ಇರ್ಬೇಕು. ಹಾಗಾಗಿ ಬ್ಯಾನರ್ ತಯಾರಕರು ತಾವೇ ಒಂದು ಡಿಸೈನ್ ಕಂಪ್ಯೂಟರ್‌ನಲ್ಲಿ ತೆಗೆದು, ಆ ಪೆಡ್ಡೆ ಹುಡುಗರಿಗೆ ಕೊಟ್ಟರೆ ಮುಗಿತು, ಅಷ್ಟುದ್ದದ ಕಟೌಟ್ ರೆಡಿ.

ಕಟೌಟ್ ಅಂದಾಗ ನಾನು ಇತ್ತೀಚೆಗೆ ನೋಡಿದ ಒಂದು ಘಟನೆ ನೆನಪಿಗೆ ಬಂತು. ಆ ಒಂದು ದೃಶ್ಯ ನನ್ನ ಮನಸ್ಸನ್ನ ಕಲಕಿದ್ದು ನಿಜ. ಅದೇನಂದ್ರೆ, ಜನಪ್ರಿಯ ನಾಯಕನೊಬ್ಬನ ಸಿನಿಮಾ ಬಿಡುಗಡೆ ಸಮಾರಂಭ, ಸಿನಿಮಾ ಥಿಯೇಟರ್ ಎತ್ತರದ್ದೇ ನಾಯಕನ ಕಟೌಟ್, ಅದಕ್ಕೆ ಸಾವಿರಾರು ರೂಪಾಯಿಯ ದಂಡೆ ಕಟ್ಟಿದ ಅದರುದ್ದದ ಹಾರಗಳು, ನೂರಾರು ಲೀಟರ್ ಹಾಲಿನ ಅಭಿಷೇಕ ಮಾಡಿದ ಹೆಗ್ಗಳಿಕೆ ಅಭಿಮಾನಿಗಳದ್ದು. ರಸ್ತೆಲಿ ಹಾಲು ನೀರಿನಂತೆ ಹರಿದುಕೊಂಡು ಹೋಗುತ್ತಿತ್ತು, ಹೊಟ್ಟೆಗಿಲ್ಲದ ಎಷ್ಟೋ ಬೀದಿ ಮಕ್ಕಳು ಆಸೆಗಣ್ಣಿನಿಂದ ನೋಡುತ್ತಿದ್ದರೆ, ನಾಯಿಗಳು ನೆಲ ನೆಕ್ಕುತ್ತಿದ್ದವು. ಕೇವಲ ಒಂದು ಸಿನಿಮಾ ಪ್ರಚಾರಕ್ಕಾಗಿ ಇಷ್ಟೆಲ್ಲಾ ಬೆಲೆ ತರಬೇಕಿತ್ತೆ? ಹೇಗೋ ಬಿಡಿ ಈ ರೀತಿಯಲ್ಲೂ ಕೆಲವರಿಗೆ ವರ್ಷಪೂರ್ತಿ ದುಡಿಮೆ ಇರುತ್ತೆ ಅನ್ನೋದೇ ಸಮಾಧಾನ.

ಕಳೆದ ವರ್ಷ ನಾವು ಹೊಸಬಡಾವಣೆಯಲ್ಲಿ ಮನೆ ಕಟ್ಟಿದೆವು. ಅದು ಊರ ಹೊರವಲಯದಲ್ಲಿ ಸ್ವಲ್ಪ ಒಳಭಾಗಕ್ಕೆ ಹೊಂದಿಕೊಂಡಂತೆ ಇತ್ತು. ಆಹ್ವಾನ ಪತ್ರಿಕೆಯಲ್ಲಿ ಮಾರ್ಗಸೂಚಿ ಕೊಟ್ಟಿದ್ದರೂ, ಮಗನ ಸಲಹೆಯಂತೆ ಮುಖ್ಯರಸ್ತೆಯ ತಿರುವಿನಲ್ಲಿ ಒಂದು ಪುಟ್ಟ ಫ್ಲೆಕ್ಸ್ 'ಸಿಂಧೂರಕ್ಕೆ ಸ್ವಾಗತ' ಎಂದು ಹಾಕಿಸಿದ್ದೆವು. ಅದು ನಮ್ಮ ಮನೇದಲ್ವೇ; ಅಷ್ಟು ಮುದ್ದಾಗಿ ಕಾಣಿಸುತ್ತಿತ್ತು ನಮಗೆ. ಆದರೂ ಕೂಡ ಗೃಹಪ್ರವೇಶದ ದಿನ ನಮ್ಮೆಲ್ಲರ ಮೊಬೈಲ್‌ಗಳು ರಿಂಗಣಿಸ್ತಲೇ ಇದ್ದವು. ನನಗೂ ರೇಗಿ ಹೋಗಿತ್ತು. ಅಷ್ಟರಲ್ಲಿ ನನ್ನ ಗೆಳತಿ ಶಾರದೆ ಕಾಲ್ ಮಾಡಿದಳು. ''ನಾವೀಗ ಸರ್ಕಲ್‌ನಲ್ಲಿ ಇದ್ದೀವಿ, ಎಲ್ಲಿಗ್ ಬರ್ಬೇಕೆ?'' ಅಂದಳು. ''ಅಲ್ಲೇ ಕ್ರಾಸಲ್ಲೇ ಫ್ಲೆಕ್ಸ್ ಇದ್ಯಲ್ಲಮ್ಮಾ... ನೋಡ್ಕಂಡ್ ಬರ್ಬಾರ್ದೆ?'' ಆಕ್ಷೇಪಿಸಿದೆ ನಾನು. ಅದಕ್ಕವಳು, ''ಲೇ... ನಾನ್ ಬಂದಿರೋದು ನಿಮ್ಮನೆ ಗೃಹಪ್ರವೇಶಕ್ಕೆ ಕಣೇ... ಯಾರದ್ದೋ ಮೊಮ್ಮಗು ನಾಮ್ಕರಣಕ್ಕಲ್ಲ'' ಅಂದ್ಲು. ಓಹೋ... ಏನೋ ಎಡವಟ್ಟಾಗಿದೆ ಅಂದ್ಕೊಂಡು, ''ಒಂದ್ಕೆಲ್ಸ ಮಾಡು, ನಿನ್ ಲೆಫ್ಟಿಗೆ ಟರ್ನ್ ಆಗಿ ಐದ್ ಹಂಪುಗಳಾದ್ಮೇಲೆ ಒಂದು ವಾಟರ್ ಟ್ಯಾಂಕ್ ಸಿಗುತ್ತೆ, ಅಲ್ಲಿಂದ ಮುಂದೆ ಬಂದ್ರೆ ಲಾಸ್ಟ್ ಲೈಟ್‌ಕಂಬ, ಅದ್ರ ರೈಟಿಗೆ ತಿರ್ಗು ಶಾಮಿಯಾನ ಕಾಣತ್ತೆ, ಅದೇ ನಮ್ಮನೆ. ಅದು ಬಿಟ್ರೆ ಬೇರೆ ಯಾರೂ ಶಾಮಿಯಾನ ಹಾಕಿಲ್ಲ ಈ ರೋಡಲ್ಲಿ.'' ಅಂದೆ. ಫಂಕ್ಷನ್ ಮುಗಿದಮೇಲೆ ಫ್ಲೆಕ್ಸ್ ಹಾಕಿದ್ರೂ ಯಾಕೀತರ ಎಡವಟ್ಟಾಯ್ತೂಂತ ಹೋಗಿ ನೋಡಿದ್ರೆ... ನಮ್ಮನೆ ಫ್ಲೆಕ್ಸ್‌ಗೆ ಅಂಟಿಕೊಂಡೇ ಇನ್ನೊಂದು ಬೃಹದಾಕಾರದ ಫಲಕ ನಿಂತಿತ್ತು. ಅದು ಈ ಏರಿಯಾದ ಕೌನ್ಸಿಲರ್ ಮೊಮ್ಮಗು ನಾಮಕರಣದ್ದು. ಅದಕ್ಕೆ ಆಹ್ವಾನಿಸೋಕೆ ಅವ್ರ ಕುಟುಂಬದ ಸುಮಾರು ಮೂವತ್ತು ಸದಸ್ಯರು ಅದ್ರಲ್ಲಿದ್ರು. ಪಾಪ! ನಮ್ಮನೆ ಫಲಕ ಮಾತ್ರ ಗುಬ್ಬಚ್ಚಿಯಂತೆ ಒಂದು ಮೂಲೆಲಿ ಮುದುಡಿ ಕುಳಿತಿತ್ತು.

ಜನವರಿ ತಿಂಗ್ಳಲ್ಲಿ ಮಕರ ಜ್ಯೋತಿ ದರ್ಶನ ಮಾಡೋಕೆ ಶಬರಿಮಲೆಗೆ ಹೋಗೋವ್ರು ಜಾಸ್ತಿ. ಹಾಗೇ ನಮ್ ಏರಿಯಾದಲ್ಲೂ ಬಹಳಷ್ಟು ಜನ ಇರುಮುಡಿ ಕಟ್ಟಿ ಮಾಲೆ ಹಾಕಿದ್ದರು. ಆ ಕೆಲವು ದಿನಗಳಲ್ಲಿ ಮಾಲೆ ಹಾಕಿದ್ದೋರು ಬಹಳ ಕಟ್ಟುನಿಟ್ಟಾಗಿ ಇರ್ಬೇಕು, ಬೀಡಿ, ಗುಟ್ಕಾ,